ಅ. ಹೌದು.

ಆ. ಇಲ್ಲ.

ಇ. ನಗರಪಾಲಿಕೆಯು ಪರವಾನಗಿಯನ್ನು ನವೀಕರಿಸುವ ಮೊದಲು ಕಂದಾಯವನ್ನು ಸಂಗ್ರಹಿಸುತ್ತದೆ.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಗೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ

2155: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಗೆ ಅಧ್ಯಕ್ಷರನ್ನು ನೇಮಿಸಲಾಗಿದೆಯೇ;

ಆ. ಇಲ್ಲವಾದಲ್ಲಿ, ಅದಕ್ಕೆ ಕಾರಣಗಳು ಏನು ? ಮತ್ತು ಹುದ್ದೆಯು ಎಂದಿನಿಂದ ಖಾಲಿ ಇರುತ್ತದೆ;

ಇ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೇ;

ಈ. ಹಾಗಿದ್ದಲ್ಲಿ, ಯಾವಾಗ;

ಉ. ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ವಿಷಯವನ್ನು ಇತ್ಯರ್ಥಗೊಳಿಸಲು ಸರ್ಕಾರವು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಇಲ್ಲ.

ಆ. ಈ ಹುದ್ದೆಯು ದಿನಾಂಕ:25-11-91ರಿಂದ ಖಾಲಿ ಇರುತ್ತದೆ. ಹೆಸರುಗಳ ಯಾದಿ ಪಟ್ಟಿಯ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲವಾದ್ದರಿಂದ ವಿಳಂಬವಾಗಿದೆ.

ಇ. ಈ ಬಗ್ಗೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿ, ನವದೆಹಲಿ, ಇವರಿಗೆ ಸಂದೇಶವನ್ನು ಕಳುಹಿಸಲಾಗಿದೆ.

ಈ. ದಿನಾಂಕ:3-3-1993ರಂದು.

ಉ. ಈ ಬಗ್ಗೆ ಉಪಪ್ರಶ್ನೆ (ಇ) ಮತ್ತು (ಈ)ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಮನೆಗಳು ಅಪೂರ್ಣ ಸ್ಥಿತಿಯಲ್ಲಿರುವ ಬಗ್ಗೆ

1527: ಶ್ರೀ ನಾರಾಯಣರಾವ್ ಮನಹಳ್ಳಿ, (ಬೀದರ್):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1.ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಮನೆಗಳು ಅಪೂರ್ಣ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ;

3. ಇಲ್ಲದಿದ್ದಲ್ಲಿ ಪಾಯದವರೆಗೆ, ಛಾವಣಿಯವರೆಗೆ ಪೂರ್ಣಗೊಳಿಸಿರುವ ಫಲಾನುಭವಿಗಳ ಗತಿಯೇನು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

1. ಇಲ್ಲ. ಬೀದರ್ ಜಿಲ್ಲೆಗೆ 1978:79ರಿಂದ 1989:90ರವರೆಗೆ ಒಟ್ಟು 18,365 ಮನೆಗಳು ಮಂಜೂರಾಗಿರುತ್ತವೆ. ಇವುಗಳಲ್ಲಿ 16,756 ಮನೆಗಳು ಪೂರ್ಣಗೊಂಡಿದ್ದು 1897 ಮನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿದ್ದು, ಇನ್ನು 212 ಮನೆಗಳ ಕಾರ್ಯ ಪ್ರಾರಂಭವಾಗಬೇಕಾಗಿದೆ. (1990–91ನೇ ಸಾಲಿಗೆ 903 ಮನೆಗಳು ಮಂಜೂರಾಗಿದ್ದು, ಹುಡ್ಕೋ ಸಾಲ ಬರದಿದ್ದರಿಂದ ಆಶ್ರಯ ಯೋಜನೆಯಲ್ಲಿ ಈ ಮನೆಗಳನ್ನು ವಿಲೀನಗೊಳಿಸಲಾಗಿದೆ. ಆದಾಗ್ಯೂ ಸರ್ಕಾರ ಬಿಡುಗಡೆ ಮಾಡಿದ ಸಹಾಯಧನವನ್ನಾಧರಿಸಿ ಮನೆಗಳ ಕಾರ್ಯ ಕೈಗೆತ್ತಿಕೊಂಡಿದ್ದು, 44 ಮನೆಗಳು ಪೂರ್ಣಗೊಂಡಿದ್ದು 67 ಮನೆಗಳ ಕಾರ್ಯ ವಿವಿಧ ಹಂತದಲ್ಲಿರುತ್ತದೆ).

2. ಮನೆಗಳ ಪ್ರಗತಿಯನ್ನಾಧರಿಸಿ ಹುಡ್ಕೋ ಸಂಸ್ಥೆ ಸಾಲದ ಕಂತು ಬಿಡುಗಡೆ ಮಾಡುತ್ತಿದ್ದು ಇನ್ನೂ 104.09 ಲಕ್ಷ ಸಾಲ ಬಿಡುಗಡೆ ಮಾಡಬೇಕಾಗಿದೆ. ಜೂನ್ 93ರ ಒಳಗೆ 40.04 ಲಕ್ಷ ಸಾಲದ ಕಂತು ಬಿಡುಗಡೆ ಮಾಡಿ ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲಾಗುವುದು.

3. ಪ್ರಗತಿ ಆಧರಿಸಿ ಉಳಿದ 60 ಲಕ್ಷ ಸಾಲದ ಹಣ ಹುಡ್ಕೋದಿಂದ ಪಡೆದು ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲಾಗುವುದು.

ರೇಷ್ಮೆ ಬೆಳೆ ಅಭಿವೃದ್ಧಿ ಬಗ್ಗೆ

1528: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳಾವುವು ?

ಅ. (ಅ) ಪೂರ್ವಭಾವಿ ಸಿದ್ಧತೆ:

1. ಒಂದು ತಾಂತ್ರಿಕ ಸೇವಾ ಕೇಂದ್ರ ಸ್ಥಾಪಿಸಿದೆ.
2. ಒಂದು ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪಿಸಿದೆ.
3. ದಾವಣಗೆರೆ ತಾಲ್ಲೂಕು ತೋಳಹುಣಸೆಯಲ್ಲಿ ತರಬೇತಿ ಶಾಲೆಯನ್ನು ಮತ್ತು ಆರೆ ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಘಟಕವನ್ನು ಸ್ಥಾಪಿಸಿದೆ.

(ಆ) ಇಲಾಖೆಯಿಂದ ಸಹಾಯ:

1. ರೈತರಿಗೆ ಹಿಪ್ಪುನೇರಳೆ ವ್ಯವಸಾಯ ಮತ್ತು ಹುಳು ಸಾಕಾಣಿಕೆಯಲ್ಲಿ ತಾಂತ್ರಿಕ ಸಲಹೆಗಳನ್ನು ಕೊಡಲಾಗುತ್ತಿದೆ.
2. ರೈತರು ಬೆಳೆದ ಗೂಡನ್ನು ಅಲ್ಲಿನ ಮಾರುಕಟ್ಟೆಯಲ್ಲೇ ಮಾರಾಟ ಮಾಡಿದರೆ ಪ್ರತಿ ಕೆ.ಜಿ. ಗೂಡಿಗೆ 5 ರೂ. ಪ್ರೋತ್ಸಾಹ ಧನ ಕೊಡಲಾಗುವುದು.
3. ಹೊಸ ಪ್ರದೇಶದಲ್ಲಿ ಉತ್ಪನ್ನರಾದ ಪ್ರತಿ ಕೆ.ಜಿ. ರೇಷ್ಮೆಗೆ 50 ರೂ. ಪ್ರೋತ್ಸಾಹ ಧನ ಕೊಡಲಾಗುವುದು.
4. ರೇಷ್ಮೆ ಹುಳುಗಳಿಗೆ ಬರತಕ್ಕ ರೋಗಗಳನ್ನು ನಿಯಂತ್ರಣ ಮಾಡಲು ಹಾಗೂ ತಡೆಗಟ್ಟಲು